# ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (ಆರ್‌ಡಬ್ಲ್ಯುಬಿಸಿಐಎಸ್)
# ಆಗಾಗ ಕೇಳಲಾಗುವ ಪ್ರಶ್ನೆಗಳು (ಎಫ್‌ಎಕ್ಯೂಗಳು)

1. **ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (ಆರ್‌ಡಬ್ಲ್ಯುಬಿಸಿಐಎಸ್) ಎಂದರೇನು ?**

ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ ಎಂದರೆ, ಹವಾಮಾನ ಇಂಡೆಕ್ಸ್ ಆಧಾರಿತ ವಿಮಾ ಯೋಜನೆಯಾಗಿದ್ದು ಇದು ಮಳೆ ಬೀಳುವಿಕೆ, ಉಷ್ಣತೆ, ಆರ್ದ್ರತೆ ಇತ್ಯಾದಿ ಪ್ರತಿಕೂಲ ಹವಾಮಾನದ ಪರಿಮಾಣಗಳ ಕಾರಣ ಬೆಳೆಗಳಲ್ಲಿನ ನಷ್ಟಗಳನ್ನು ಒಳಪಡಿಸುತ್ತಿದ್ದು ಇದು ಪ್ರತಿಕೂಲ ಹವಾಮಾನ ಪರಿಸ್ಥಿತಿಯ ಕಾರಣ ಹೊಲದಲ್ಲಿ ಬೆಳೆಗಳ ನಷ್ಟದಿಂದಾಗುವ ನಷ್ಟದಿಂದ ಕೃಷಿಕರಿಗೆ ಸಂರಕ್ಷಣೆ ಒದಗಿಸುತ್ತದೆ.

2. **ಬೆಳೆಯು ಪರಿಣಾಮಗೊಳ್ಳುವ ಮತ್ತು ಅಪಾಯಗಳು ಒಳಗೊಂಡಿರುವ ಹವಾಮಾನದ ಪರಿಮಾಣಗಳಾವುವು ?**

ಹವಾಮಾನದ ಪರಿಮಾಣಗಳು ಮಳೆಯ ಕೊರತೆ/ಅಕಾಲಿಕ ಮಳೆ, ದಿನದಲ್ಲಿ ಶುಷ್ಕತೆ, ಉಷ್ಣತೆಯಲ್ಲಿ ತೀವ್ರ ಏರಿಳಿತಗಳು, ಅಧಿಕ/ಕಡಿಮೆ ಉಷ್ಣತೆ, ಸಂಬಂಧಿತ ಆರ್ದ್ರತೆ, ಗಾಳಿಯ ವೇಗ ಮತ್ತು /ಅಥವಾ ಈ ಮೇಲಿನವುಗಳ ಸಂಯೋಜನೆಯಾಗಿರಬಹುದು.

ಪ್ರತಿಯೊಂದು ಬೆಳೆಗೂ ಉತ್ಪನ್ನದ ನಿಯಮ ಮತ್ತು ನಿಬಂಧನೆಗಳು ಪೂರ್ವ ನಿರ್ಧಾರಿತವಾಗಿವೆ ಮತ್ತು ಸರಕಾರಿ ಅಧಿಸೂಚನೆಯಲ್ಲಿ ನಮೂದಿಸಲಾಗಿರುತ್ತವೆ.

3. **ಕ್ಲೈಮ್‌ನ ಮೌಲ್ಯ ಮಾಪನವನ್ನು ಹೇಗೆ ಮಾಡಲಾಗುತ್ತದೆ ?**

ಎ. ಕ್ಲೈಮ್‌ಗಳನ್ನು ಮೊದಲೇ ಒಪ್ಪಿಕೊಳ್ಳಲಾದ ಸಹನೀಯತೆಯಿಂದ ಮಾರ್ಗ ಬದಲಾವಣೆ ಅಥವಾ ಉತ್ಪನ್ನದ ನಿಯಮದ ಹಾಳೆಯಲ್ಲಿ ನಮೂದಿಸಲಾದ ಥ್ರೆಶೋಲ್ಡ್ ಮಟ್ಟಕ್ಕೆ ಅನುಗುಣವಾಗಿ ಮಾಡಲಾಗುತ್ತದೆ ಮತ್ತು ಕ್ಲೈಮ್‌ಗಳ ಗಣನೆಗೆ ಇತರ ಯಾವುದೇ ಕ್ರಮ ವಿಧಾನವನ್ನು ಅಥವಾ ಗಣನೆಯನ್ನು ಉಪಯೋಗಿಸಲಾಗುವುದಿಲ್ಲ.

ಬಿ. ಕ್ಲೈಮ್‌ಗಳ ಮೌಲ್ಯ ಮಾಪನವನ್ನು ನಿರ್ದಿಷ್ಟಪಡಿಸಲಾದ ಹವಾಮಾನ ಸ್ಟೇಶನ್‌ಗಳಲ್ಲಿ ದಾಖಲಿಸಲಾದ ಹವಾಮಾನದ ಡೇಟಾಗಳ ಆಧಾರದಲ್ಲಿ ಮಾಡಲಾಗುತ್ತದೆ ಮತ್ತು ಹವಾಮಾನ ಡೇಟಾವು ಸ್ವೀಕರಿಸಲ್ಪಟ್ಟ ನಂತರ ಕ್ಲೈಮ್‌ಗಳ ಪ್ರಕ್ರಿಯೆಯು ಆರಂಭವಾಗುತ್ತದೆ.

ಸಿ. ಕ್ಲೈಮ್‌ಗಳ ಸಂಸ್ಕರಣೆಯು ಕಟ್ಟುನಿಟ್ಟಾಗಿ ಉತ್ಪನ್ನದ ನಿಯಮ ಹಾಳೆಗಳು, ಪಾವತಿಯ ರಚನೆ ಮತ್ತು ಯೋಜನೆಯ ನಿಬಂಧನೆಗಳು ಇರುತ್ತದೆ.

ಡಿ. ಹವಾಮಾನದ ಡೇಟಾವನ್ನು ಐಎಮ್‌ಡಿ (ಭಾರತೀಯ ಹವಾಮಾನ ಇಲಾಖೆ), ಎನ್‌ಸಿಎಮ್‌ಎಲ್ (ರಾಷ್ಟ್ರೀಯ ಕೊಲ್ಲೇಟರಲ್ ಮ್ಯಾನೇಜ್‌ಮೆಂಟ್ ಲಿಮಿಟೆಡ್), ಸ್ಕೈಮೆಟ್ ಮುಂತಾದ ಸ್ವತಂತ್ರ ಡೇಟಾ ಮೂಲದಿಂದ ಪಡೆದುಕೊಳ್ಳಲಾಗುತ್ತಿದ್ದು ಇವು ಸರಕಾರದಿಂದ ಅನುಮೋದಿಸಲ್ಪಟ್ಟಿವೆ.

ಇ. ಕ್ಲೈಮ್‌ನ ಮೌಲ್ಯಾಂಕನಕ್ಕಾಗಿ ಸರಕಾರದಿಂದ ಸೂಚಿಸಲಾದ ಉತ್ಪನ್ನದ ನಿಯಮ ಹಾಳೆಯ ತನಕ ಬೆಳೆಯ ಸಮೀಕ್ಷೆಯ ಆವಶ್ಯಕತೆ ಇಲ್ಲ.

4. **ಈ ಯೋಜನೆಯಡಿಯಲ್ಲಿ ಯಾವ ಬೆಳೆಯನ್ನು ಒಳಪಡಿಸಬಹುದು?**

ಹೆಚ್ಚಾಗಿ ತೋಟಗಾರಿಕೆ ಮತ್ತು ವಾರ್ಷಿಕ ವಾಣಿಜ್ಯ ಬೆಳೆಯು ಆರ್‌ಡಬ್ಲ್ಯುಬಿಸಿಐಎಸ್‌ನಡಿಯಲ್ಲಿ ಒಳಗೊಳ್ಳುತ್ತವೆ.

5. **ಈ ಯೋಜನೆಯಡಿಯಲ್ಲಿ ವಿಧಿಸಲಾಗುವ ಪ್ರೀಮಿಯಂ ದರಗಳೇನು ?**

ತೋಟಗಾರಿಕೆ ಮತ್ತು ವಾರ್ಷಿಕ ವಾಣಿಜ್ಯ ಬೆಳೆಗಳಿಗಾಗಿ ಕೃಷಿಕರಿಂದ ಪಾವತಿಸಲಾಗುವ ಪ್ರೀಮಿಯಂ ದರವು ಆಶ್ವಾಸಿತ ಮೊತ್ತದ 5% ಅಥವಾ ವಾಸ್ತವಿಕ ಪ್ರೀಮಿಯಂ ದರ, ಇವುಗಳಲ್ಲಿ ಯಾವುದು ಕಡಿಮೆಯೋ ಅದಾಗಿರುತ್ತದೆ.

6. **ಆಲಿಕಲ್ಲು ಮಳೆಯು ಒಳಗೊಂಡಿದೆಯೇ ಮತ್ತು ಕ್ಲೈಮ್ ಮಾಡುವುದು ಹೇಗೆ?**

ಸರಕಾರವು ವಿಶೇಷತ: ಉತ್ಪನ್ನವನ್ನು ಸರಕಾರಿ ಅಧಿಸೂಚನೆಯಲ್ಲಿ ಸೇರಿಕೆ ಕವರ್ ಆಗಿ ಅನುಮೋದಿಸಿದ್ದರೆ ಮಾತ್ರ ಆಲಿಕಲ್ಲು ಮಳೆಯನ್ನು ಒಳಪಡಿಸಲಾಗುತ್ತದೆ.

**ಆಲಿಕಲ್ಲು ಮಳೆಗಾಗಿ ಹೆಚ್ಚುವರಿ ಕವರ್:** ನಿಗದಿತ ಜಾಗದ ಪ್ರತ್ಯೇಕ ಹೊಲಗಳಲ್ಲಿ ಆಲಿಕಲ್ಲು ಮಳೆಯ ಪರಿಣಾಮದಿಂದ ಉಂಟಾದ ನಷ್ಟ/ಹಾನಿ

I. ಆಲಿಕಲ್ಲು ಮಳೆಯ ಕಾರಣ ಬೆಳೆಯ ನಷ್ಟ ಉಂಟಾಗಿ ಇದು ಗೊತ್ತುಮಾಡಲಾದ ಯೂನಿಟ್ ಅಥವಾ ಜಾಗದ ಭಾಗದ ಮೇಲೆ ಪರಿಣಾಮ ಉಂಟು ಮಾಡಿದರೆ ಕೃಷಿಕನು ಕ್ಲೈಮ್‌ಗೆ ಅರ್ಹನಾಗಿರುತ್ತಾನೆ.

II. <u>**ಅರ್ಹತೆಯ ಮಾನದಂಡಗಳು:**</u>

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617 UID-XXXX

ಹಾನಿಯ ಮೊದಲು ಪ್ರೀಮಿಯಂ ಪಾವತಿಸಿರುವ/ಅವರ ಬ್ಯಾಂಕ್ ಖಾತೆಗೆ ಪ್ರೀಮಿಯಂ ಡೆಬಿಟ್ ಮಾಡಲಾದ ಕೃಷಿಕರು ಮಾತ್ರ ಕ್ಲೈಮ್ ಮಾಡಬಹುದಾಗಿದೆ.
ಟಿಪ್ಪಣಿ : ಗರಿಷ್ಠ ಪಾವತಿಯು ಆಶ್ವಾಸಿತ ಮೊತ್ತಕ್ಕೆ ಒಳಪಟ್ಟು, ವಿಮೆ ಮಾಡಲಾದ ಅಪಾಯ ಉಂಟಾಗುವ ತನಕ ಬಳಸಿದ ಸಾಮಾಗ್ರಿಯ ಮೇಲೆ ಮಾಡಲಾದ ವೆಚ್ಚಕ್ಕೆ ಸಂಬಂಧಿಸಿದೆ.

III. **<u>ನಷ್ಟದ ಮೌಲ್ಯ ಮಾಪನದ ಕಾರ್ಯವಿಧಿ:</u>**

ಕೃಷಿಕರು ಹಾನಿ ಉಂಟಾದ ನಂತರ 72 ತಾಸುಗಳೊಳಗೆ ಸೂಚನೆಯನ್ನು ಒದಗಿಸಬೇಕು. ಆಲಿಕಲ್ಲು ಮಳೆ/ಸೇರಿಕೆ ಕವರ್ ಆದರೆ, ನಮ್ಮ ಕಾಲ್ ಸೆಂಟರ್ ನಂಬರ್ 1800 266 0700 ಇಲ್ಲಿಗೆ ಒದಗಿಸಬೇಕು ಮತ್ತು ಸೂಚನೆಯು ಸರ್ವೆ ನಂಬರ್-ಪ್ರಕಾರ ವಿಮೆ ಮಾಡಲಾದ ಬೆಳೆ ಮತ್ತು ಪರಿಣಾಮಗೊಂಡ ಎಕರೆ ಜಾಗದ ವಿವರಗಳನ್ನು ಒಳಗೊಂಡಿರಲೇಬೇಕು.

ಕೃಷಿಕರು ನಂತರ ಕ್ಲೈಮ್‌ಗಳ ಪಾವತಿಗಾಗಿ ಆವಶ್ಯಕವಾದ ಎಲ್ಲಾ ಸಂಬಂಧಿತ ದಸ್ತಾವೇಜುಗಳೊಂದಿಗೆ ತುಂಬಿಸಲಾದ ಕ್ಲೈಮ್ ಫಾರ್ಮ್‌ನ್ನು ಕೂಡಾ ಒದಗಿಸಬೇಕು. ನಷ್ಟದ ಮೌಲ್ಯ ಮಾಪನ ಮಾಡುವವರನ್ನು ನೇಮಕಗೊಳಿಸಲಾಗುತ್ತದೆ ಮತ್ತು ಮೌಲ್ಯ ಮಾಪನವನ್ನು ನಿಗದಿತ ಸಮಯಾವಧಿಯೊಳಗೆ ಪೂರ್ಣಗೊಳಿಸಲಾಗುತ್ತದೆ, ಬಳಿಕ ನಷ್ಟದ ಮೌಲ್ಯ ಮಾಪನದ ವರದಿಯನ್ನು ಅಂತಿಮಗೊಳಿಸಿದ ನಂತರ ಕ್ಲೈಮ್‌ಗಳನ್ನು ತೀರಿಸಲಾಗುತ್ತದೆ.

ಕ್ಲೈಮ್‌ಗೆ ಸಂಬಂಧಿಸಿದ ವಿಚಾರಣೆಗಳಿಗಾಗಿ ಗ್ರಾಹಕರು ನಮ್ಮ 1800 266 0700 ಈ ಕಾಲ್ ಸೆಂಟರ್ ನಂಬರ್‌ಗೆ ಕರೆ ಮಾಡಬಹುದು ಅಥವಾ care@hdfcergo.com ಇಲ್ಲಿಗೆ ಇ ಮೇಲ್ ಬರೆಯಬಹುದು.

7. **ಸಾಮಾನ್ಯ ಪ್ರೀಯಿಯಂ ಸಬ್ಸಿಡಿ ಅನುಪಾತ ಏನಿದೆ?**

ಎ. ವಿಮಾ ಗಣಿತದ ಪ್ರಿಮಿಯಂ ದರ ಮತ್ತು ಕೃಷಿಕರಿಂದ ಪಾವತಿಸಲ್ಪಡುವಪ್ರೀಮಿಯಂ ದರಗಳ ನಡುವಿನ ವ್ಯತ್ಯಾಸವನ್ನು ಸಾಮಾನ್ಯ ಸಬ್ಸಿಡಿ ದರವೆಂದು ಪರಿಗಣಿಸಲಾಗಿ, ಇದು ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಸಮನಾಗಿ ಹಂಚಿಕೊಳ್ಳಲ್ಪಡುತ್ತದೆ.

ಬಿ. ಕೆಲವು ರಾಜ್ಯಗಳು ಅಧಿಸೂಚನೆಯಂತೆ ನಿರ್ದಿಷ್ಟಪಡಿಸಲಾದ ಸಬ್ಸಿಡಿಗೆ ಹೆಚ್ಚುವರಿಯಾಗಿ ತನ್ನ ಬಜೆಟ್‌ನಿಂದ ಹೆಚ್ಚುವರಿ ಸಬ್ಸಿಡಿಯನ್ನು ಒದಗಿಸುತ್ತವೆ ಮತ್ತು ಕೃಷಿಕರು ಇದರ ಬಗ್ಗೆ ಸರಕಾರದ ವೆಬ್‌ಸೈಟ್‌ನಲ್ಲಿ ಸ್ಥಿತಿಯನ್ನು ಪರಿಶೀಲಿಸಬಹುದು.

8. **ಆರ್‌ಡಬ್ಲ್ಯುಬಿಸಿಐಎಸ್‌ನಡಿಯಲ್ಲಿ ಕವರ್ ಮಾಡಿಕೊಳ್ಳಲು ಕೃಷಿಕರ ಅರ್ಹತೆ ಏನಿದೆ?**

ಶೇರ್‌ಕ್ರಾಪರ್ ಮತ್ತು ಟೆನೆಂಟ್ ಕೃಷಿಕರನ್ನೊಳಗೊಂಡು ವಿಮೆಯಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ಕೃಷಿಕರನ್ನು ಈ ಯೋಜನೆಯಡಿಯಲ್ಲಿ ಒಳಪಡಿಸಬಹುದಾಗಿದೆ. ಅಲ್ಲದೆ ಒಳಗೊಂಡಿರುವ ಕೃಷಿಕರನ್ನು 2 ವಿಭಾಗಗಳಲ್ಲಿ ವಿಭಾಗಿಸಲಾಗುತ್ತದ :-

- *ಅಧಿಸೂಚಿತ/ವಿಮ ಬೆಳೆಗಳಿಗೆ ವಿಮೆ ಮಾಡುವ ಆಸಕ್ತಿಯು ರೈತರಲ್ಲಿ ಇರಬೇಕು*
- *ಸಾಲ ಪಡೆದ ರೈತರು ಸೇರಿದಂತೆ ಎಲ್ಲಾ ರೈತರಿಗೂ ಯೋಜನೆಯನ್ನು ಸ್ವಯಂಪ್ರೇರಿತಗೊಳಿಸಲಾಗಿದೆ*
- ಅಧಿಸೂಚಿತ ಕೃಷಿ ಚಟುವಟಿಕೆಗಳಿಗಾಗಿ ಸಾಲ ಪಡೆದ ಎಲ್ಲಾ ರೈತರು ಅಂದರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದ ರೈತರು (ಸಹಕಾರಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು ಇತ್ಯಾದಿ) ಕೊನೆಯ ದಿನಾಂಕಕ್ಕಿಂತ ಏಳು ದಿನ ಮುಂಚೆ ಹೊರಗೆ ಉಳಿಯದೇ ಇರುವುದಕ್ಕೆ ಆಯ್ಕೆ ಮಾಡಿಕೊಳ್ಳದ ರೈತರು ತಮ್ಮ ಹಣಕಾಸು ಸಂಸ್ಥೆಗಳಿಂದ ಅವರು ಈ ಯೋಜನೆಗೆ ನೋಂದಣಿಗೆ ಮಾಡಿಸಿಕೊಳ್ಳಲು ಅರ್ಹರಾಗಿರುತ್ತಾರೆ. ನಂತರ ಬ್ಯಾಂಕ್/ಸಿಎಸ್ ಸಿ/ಮಧ್ಯಸ್ಥಿಕೆದಾರರು ಭಾರತ ಸರ್ಕಾರದ ನ್ಯಾಷನಲ್ ಕ್ರಾಪ್ ಇನ್ಶೂರೇನ್ಸ್ ಪೋರ್ಟಲ್ (ಎನ್ ಸಿಐಪಿ) www.pmfby.gov.in ***ಇಲ್ಲಿ ಕೊನೆಯ ದಿನಾಂಕದೊಳಗೆ ರೈತರನ್ನು ನೋಂದಾಯಿಸಿಕೊಳ್ಳಲಾಗುತ್ತದೆ***
- *ಸಾಲ ಪಡೆಯದ ರೈತರು ರಾಜ್ಯದಲ್ಲಿ ಚಾಲ್ತಿ ಇರುವ ಜಮೀನು ಹಕ್ಕು ಬಾಧ್ಯತಾ ಪತ್ರ ಮತ್ತು ಭೂಸ್ವಾಧೀನ ಪ್ರಮಾಣ ಪತ್ರ ಮತ್ತು/ಅಥವಾ ಅನ್ವಯವಾಗುವಂತಹ ಗುತ್ತಿಗೆ/ಭೋಗ್ಯದ ವಿವರಗಳ ದಾಖಲೆ/ಅಧಿಸೂಚಿತ ಇತರ ದಾಖಲೆಗಳು/ ಆಯಾ ರಾಜ್ಯಗಳು ಅನುಮತಿಸಿದಂತೆ (ಪಾಲುದಾರ ರೈತ/ಗುತ್ತಿಗೆ ರೈತನಾಗಿದ್ದ ಪಕ್ಷದಲ್ಲಿ) ಅಗತ್ಯ ಭೂದಾಖಲೆಗಳನ್ನು ಸಲ್ಲಿಸಬೇಕು*
- *ಪಿಎಂಎಫ್ ಬಿವೈ ಅಡಿ ಅಧಿಸೂಚಿತ ಬೆಳೆಗೆ ವಿಮೆ ಸೌಲಭ್ಯ ಪಡೆಯಲಿಚ್ಛಿಸುವ ಸಾಲ ಪಡೆಯದ ರೈತರು ಹತ್ತಿರದ ಬ್ಯಾಂಕು/ಪಿಎಸಿಎಸ್/ಅಧಿಕೃತ ಪಾಲುದಾರರು/ಇನ್ಶೂರೆನ್ಸ್ ಕಂಪನಿಯ ಮಧ್ಯಸ್ಥಿಕೆದಾರರನ್ನು ಅಂತಿಮ ದಿನಾಂಕದೊಳಗೆ ಭೇಟಿ ಮಾಡಿ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆ ಅರ್ಜಿಯನ್ನು ಭರ್ತಿ ಮಾಡಿ ಅಗತ್ಯ ವಿಮಾ ಕಂತು ಪಾವತಿ ಮಾಡಿ ಬ್ಯಾಂಕ್/ಇನ್ಶೂರೆನ್ಸ್ ಮಧ್ಯಸ್ಥಿಕೆದಾರ/ಸಿಎಸ್ ಸಿ ಕೇಂದ್ರಗಳಲ್ಲಿ ಬೇಸಾಯ ಮಾಡುತ್ತಿರುವ ಜಮೀನಿನಲ್ಲಿ ವಿಮಾಯೋಗ್ಯ ಬೆಳೆ ಬೆಳೆದಿರುವ ದಾಖಲೆಗಳನ್ನು (ಉದಾ, ಮಾಲೀಕತ್ವ/ಗೇಣಿದಾರ/ಬೇಸಾಯದ ಹಕ್ಕು) ಸೇರಿದಂತೆ ಇತರ ಅಗತ್ಯ ದಾಖಲೆಗಳ ಜೊತೆಗೆ ಪ್ರಸ್ತಾವ ಅರ್ಜಿ ಸಲ್ಲಿಸಬೇಕು.*
- ಕವರೇಜ್‌ನ ಅಪೇಕ್ಷೆ ಇರುವ ಕೃಷಿಕರು ಗೊತ್ತು ಮಾಡಲಾದ ಬ್ಯಾಂಕ್ ಶಾಖೆಯಲ್ಲಿ ಒಂದು ಖಾತೆಯನ್ನು ತೆರೆಯಬೇಕು/ಚಲಾಯಿಸಬೇಕು ಮತ್ತು ವಿವರಗಳನ್ನು ಪ್ರಸ್ತಾವ ಫಾರ್ಮ್‌ನಲ್ಲಿ ಒದಗಿಸಬೇಕು.
- ಕೃಷಿಕರು ತಮ್ಮ ಜಮೀನಿನ ಗುರುತು ನಂಬರ್‌ನ್ನು ಪ್ರಸ್ತಾವದಲ್ಲಿ ನಮೂದಿಸಬೇಕು ಮತ್ತು ಬೇಸಾಯ ಮಾಡುವ ಜಮೀನಿನ ಸ್ವಾಧೀನತೆಯ ಬಗ್ಗೆ ದಸ್ತಾವೇಜಿನ ಪುರಾವೆಯನ್ನು ಒದಗಿಸಲೇಬೇಕು. ಬೇಸಾಯಗಾರು ಬೆಳೆಯನ್ನು ಬೆಳೆಸಿದ ಬಗ್ಗೆ ದೃಢೀಕರಣ ಪ್ರಮಾಣಪತ್ರವನ್ನು ನೀಡಲೇಬೇಕು.
- ಕೃಷಿಕರು ಜಮೀನಿನ ತುಂಡಿನಲ್ಲಿ ಬೆಳೆಸಿದ/ಬೆಳೆಸಲು ಪ್ರಸ್ತಾವಿಸಲಾದ ನಿಗದಿಗೊಳಿಸಲಾದ ಬೆಳೆ(ಗಳು)ಗಾಗಿ ವಿಮಾ ಸುರಕ್ಷೆಯನ್ನು ಪಡೆಯುತ್ತಿದ್ದಾರೆ ಎಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು. ಯಾವುದೇ ಡುಪ್ಲಿಕೇಟ್ ಅಥವಾ ದ್ವಿಗುಣ ವಿಮೆಗೆ ಅನುವು ಮಾಡಲಾಗುವುದಿಲ್ಲ ಮತ್ತು ಇಂತಹ ಯಾವುದೇ ಪ್ರಸಂಗಗಳಲ್ಲಿ ಕೃಷಿಕರು ಸುರಕ್ಷೆಗೆ ಅರ್ಹರಿರುವುದಿಲ್ಲ. ಇಂತಹ ಎಲ್ಲಾ ಕ್ಲೈಮ್‌ಗಳನ್ನು ತಿರಸ್ಕರಿಸುವ ಮತ್ತು ಪ್ರೀಮಿಯಂನ್ನು ಮರುಪಾವತಿಸದಿರುವ ಹಕ್ಕನ್ನು ವಿಮಾ ಕಂಪೆನಿಯು ಕಾಯ್ದಿರಿಸಿಕೊಂಡಿದೆ.

- ಈ ವಿಭಾಗದಡಿ ಯೋಜನೆಯು ಗರಿಷ್ಠ ಎಸ್‌ಸಿ/ಎಸ್‌ಟಿ ಕೃಷಿಕರನ್ನು/ಮತ್ತು ಸ್ತ್ರೀ ಕೃಷಿಕರನ್ನು ಒಳಪಡಿಸುವ ಉದ್ದೇಶನ್ನು ಕೂಡಾ ಹೊಂದಿದೆ.
- *ಬೆಳೆ ಯೋಜನೆಯಲ್ಲಿ ಮಾಡುವ ಯಾವುದೇ ಬದಲಾವಣೆಯನ್ನು ಅಂತಿಮ ದಿನಾಂಕಕ್ಕೆ ಎರಡು ದಿನ ಮುಂಚೆ ಬ್ಯಾಂಕ್‌ನ ಗಮನಕ್ಕೆ ತರಬೇಕು.*
- *ಎಸ್‌ಎಲ್ ಸಿಸಿಸಿ/ರಾಜ್ಯದಿಂದ ಘೋಷಣೆ ಮಾಡಿದ ನಿಗದಿತ ಅಂತಿಮ ದಿನಾಂಕದವರೆಗೆ ಮಾತ್ರ ವಿಮಾ ಪ್ರಸ್ತಾವನೆಯನ್ನು ಸ್ವೀಕರಿಸಲಾಗುತ್ತದೆ*

9. **ಆರ್‌ಡಬ್ಲ್ಯುಬಿಸಿಐಎಸ್‌ಗೆ ದಾಖಲುಗೊಳ್ಳಲು ಯಾವುದೇ ಸಮಯ ಮಿತಿ ಇದೆಯೇ?** ಅನ್ವಯವಾಗುವ ಪ್ರೀಮಿಯಂಗೆ ಸಂಬಂಧಿಸಿ ಎಲ್ಲಾ ದಾಖಲಾತಿಗಗಳನ್ನೂ ಆಯಾಯ ರಾಜ್ಯದ ಸರಕಾರಿ ಅಧಿಸೂಚನೆಯಲ್ಲಿಯಲ್ಲಿ ವ್ಯಾಖ್ಯಾನಿಸಲಾದ ಕಟ್-ಆಫ್ [illegible] ಮತ್ತು ಪ್ರೀಮಿಯಂನ ಕೃಷಿಕರ ಪಾಲನ್ನು ಬ್ಯಾಂಕ್ ಅಥವಾ ಮಧ್ಯವರ್ತಿಯು ಕಟ್-ಆಫ್ ತಾರೀಖಿನೊಳಗೆ ವಿಮಾ ಕಂಪೆನಿಗೆ ರವಾನಿಸಬೇಕು. ಕಟ್-ಆಫ್ ತಾರೀಖುಗಳ ನಂತರ ಯಾವುದೇ ವಿಳಂಬವಾದರೆ, ಕವರೇಜ್‌ನ್ನು ನಿರಾಕರಿಸುವ ಹಕ್ಕು ವಿಮಾ ಕಂಪೆನಿಗಿದೆ.

10. **ವೈಯಕ್ತಿಕ ಕೃಷಿಕರಿಗೆ ಆಶ್ವಾಸಿತ ಮೊತ್ತದ ಮಿತಿ ಎನಿದೆ?**

ವೈಯಕ್ತಿಕ ಕೃಷಿಕರಿಗಾಗಿ ಆಶ್ವಾಸಿತ ಮೊತ್ತವು ಪ್ರತೀ ಹೆಕ್ಟೇರಿಗೆ ಫೈನಾನ್ಸ್‌ನ ಸ್ಕೇಲ್‌ಗೆ ಕೃಷಿಕರಿಗೆ ವಿಮೆಗಾಗಿ ಗೊತ್ತು ಮಾಡುವ ಬೆಳೆಯ ಜಾಗವನ್ನು ಗುಣಿಸುವುದಾಗಿದೆ. ರಾಜ್ಯಗಳಲ್ಲಿ ಬೇರೆ ಬೇರೆ ಬೆಳೆಗಳಿಗಾಗಿ ಎಚ್‌ಡಿಎಫ್‌ಸಿ ಇರ್ಗೋಗೆ ಖರೀಫ್ 2018ಕ್ಕೆ ಅಲೋಕೇಟ್ ಮಾಡಲಾದ ಆಶ್ವಾಸಿತ ಮೊತ್ತವನ್ನು ಆಯಾಯ ರಾಜ್ಯದ ವಿಭಾಗದಲ್ಲಿ ವೀಕ್ಷಿಸಬಹುದಾಗಿದೆ.

11. **ಸಾಲ ಪಡೆದಿರುವ ಕೃಷಿಕರಿಂದ ಪ್ರಸ್ತಾವ ಮತ್ತು ಪ್ರೀಮಿಯಂ ಸಂಗ್ರಹಿಸುವ ಪ್ರಕ್ರಿಯೆ ಎನಿದೆ?**

ಸಾಲ ಪಡೆದ ಎಲ್ಲಾ ರೈತರಿಗೆ ಯೋಜನೆಯನ್ನು ಐಚ್ಛಿಕಗೊಳಿಸಲಾಗಿದೆ.

ಅಧಿಸೂಚಿತ ಕೃಷಿ ಚಟುವಟಿಕೆಗಳಿಗಾಗಿ ಸಾಲ ಪಡೆದ ಎಲ್ಲಾ ರೈತರು ಅಂದರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದ ರೈತರು (ಸಹಕಾರಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು ಇತ್ಯಾದಿ) ಕೊನೆಯ ದಿನಾಂಕಕ್ಕಿಂತ ಏಳು ದಿನ ಮುಂಚೆ ಹೊರಗೆ ಉಳಿಯದೇ ಇರುವುದಕ್ಕೆ ಆಯ್ಕೆ ಮಾಡಿಕೊಳ್ಳದ ರೈತರು ತಮ್ಮ ಹಣಕಾಸು ಸಂಸ್ಥೆಗಳಿಂದ ಅವರು ಈ ಯೋಜನೆಗೆ ನೋಂದಣಿಗೆ ಮಾಡಿಸಿಕೊಳ್ಳಲು ಅರ್ಹರಾಗಿರುತ್ತಾರೆ. ನಂತರ ಬ್ಯಾಂಕ್/ಸಿಎಸ್ ಸಿ/ಮಧ್ಯಸ್ಥಿಕೆದಾರರು ಭಾರತ ಸರ್ಕಾರದ ನ್ಯಾಷನಲ್ ಕ್ರಾಪ್ ಇನ್ಶೂರೆನ್ಸ್ ಪೋರ್ಟಲ್ (ಎನ್ ಸಿಐಪಿ) www.pmfby.gov.in ***ನಲ್ಲಿ ಕೊನೆಯ ದಿನಾಂಕದೊಳಗೆ ರೈತರನ್ನು ನೋಂದಾಯಿಸಿಕೊಳ್ಳಲಾಗುತ್ತದೆ***

ಬೆಳೆಗಳ ಋತುಮಾನದ ಆಧಾರದ ಮೇಲೆ ಬ್ಯಾಂಕುಗಳು ಸಾಲದ ಅರ್ಹತೆಯನ್ನು ಪ್ರತ್ಯೇಕವಾಗಿ ಅಧಿಸೂಚಿತ ಬೆಳೆಗಳಿಗಾಗಿ ಸಾಲ ಪಡೆಯುವ ರೈತನ ಮುಂಗಾರು ಮತ್ತು ಹಿಂಗಾರು ಬೆಳೆಗಳ ಆರ್ಥಿಕತೆ ಮತ್ತು ಘೋಷಿತ ಎಕರೆ ಇಳುವರಿಯ ಆಧಾರದ ಮೇಲೆ ಲೆಕ್ಕ ಹಾಕಬೇಕು

12. **ಸಾಲ ಪಡೆಯದಿರುವ ಕೃಷಿಕರಿಂದ ಪ್ರಸ್ತಾವ ಮತ್ತು ಪ್ರೀಮಿಯಂ ಸಂಗ್ರಹಿಸುವ ಪ್ರಕ್ರಿಯೆ ಎನಿದೆ?**

ಎ.ಐಚ್ಛಿಕ ವಿಭಾಗದಡಿಯಲ್ಲಿ ಸಾಲ ಪಡೆಯದ ಕೃಷಿಕರು-ಚಾನೆಲ್ ಪಾರ್ಟ್‌ನರ್/ಮಧ್ಯವರ್ತಿಗಳು

ಎಸ್‌ಓಎ ಸಾಲಗಳನ್ನು ಪಡೆಯದಿರುವ ಮತ್ತು ವಿಮೆ ಮಾಡಿಸಿಕೊಳ್ಳುವಲ್ಲಿ ಆಸಕ್ತರಾಗಿರುವ ಎಲ್ಲಾ ಕೃಷಿಕರನ್ನು ಕೇವಲ ಅತಿ ಹತ್ತಿರದ ವಾಣಿಜ್ಯ ಬ್ಯಾಂಕ್ ಅಥವಾ ವಲಯದ ಗ್ರಾಮೀಣ ಬ್ಯಾಂಕ್ (ಆರ್‌ಆರ್‌ಬಿ) ಅಥವಾ ಪಿಎಸಿಎಸ್ (ಡಿಸಿಸಿಬಿ) ಶಾಖೆಗೆ ಭೇಟಿ ನೀಡುವ ಮೂಲಕ ಒಳಗೊಳಿಸಿಕೊಳ್ಳಬಹುದಾಗಿದೆ. ಬ್ಯಾಂಕ್ ಅಧಿಕಾರಿಗಳು ಪ್ರಸ್ತಾವ ಫಾರ್ಮ್‌ಗಳನ್ನು, ಸಂಬಂಧಿತ ದಸ್ತಾವೇಜುಗಳನ್ನು ತುಂಬಿಸುವುದು, ಆಶ್ವಾಸಿತ ಮೊತ್ತ ಕೃಷಿಕರಿಗೆ ಸಹಾಯ ಮಾಡುತ್ತಾರೆ ಮತ್ತು ಮಾರ್ಗದರ್ಶನ ನೀಡುತ್ತಾರೆ. ಇಂತಹ ಪ್ರಸಂಗಗಳಿಗೆ ಒಂಯು ಆವಶ್ಯಕವಾಗಿದ.

ಎಸ್‌ಎಓ ಸಾಲಗಳನ್ನು ಪಡೆಯದಿರುವ ಮತ್ತು ತಮ್ಮ ವಿವೆಯಲ್ಲಿ ಆಸಕ್ತರಾಗಿರುವ ಎಲ್ಲಾ ಕೃಷಿಕರನ್ನು ಪ್ರಸ್ತಾವ ಫಾರ್ಮ್‌ನ್ನು ಮತ್ತು ಆವಶ್ಯಕ ಪ್ರೀಮಿಯಂ ಮೊತ್ತದೊಂದಿಗೆ ಸಂಬಂಧಿತ ದಸ್ತಾವೇಜನ್ನು ತುಂಬಿಸಿ ಮತ್ತು ಅದನ್ನು **ಐಆರ್‌ಡಿಎ, ಮಧ್ಯವರ್ತಿಗಳಿಂದ ಗೊತ್ತುಮಾಡಲಾದವರಿಗೆ ಅನುಮೋದನೆಗಾಗಿ ಸಲ್ಲಿಸುವ ಮೂಲಕ ಒಳಪಡಿಸಲಾಗುತ್ತದೆ. ಗೊತ್ತುಮಾಡಲಾದ ಮಧ್ಯವರ್ತಿಗಳು ವಿಮೆಯ ಮೇಲಿನ ಆಸಕ್ತಿಯನ್ನು ಮತ್ತು ಜಮೀನಿನ ದಾಖಲೆ, 7/12 ಎಕ್ಸ್‌ಟ್ರಾಕ್ಟ್ ಅಥವಾ ಜಮೀನಿನ ಹಕ್ಕುಗಳ ದಾಖಲೆ, ಬೀಜ ಬಿತ್ತನೆಯ ಪ್ರಮಾಣ ಪತ್ರ, ಐಡಿ ಪುರಾವೆ, ಬ್ಯಾಂಕ್ ಪಾಸ್ ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಫೋಟೋ ಗುರುತು ಇಲ್ಲದಿದ್ದರೆ ಕ್ಯಾನ್ಸಿಲ್ಡ್ ಚೆಕ್ ಮತ್ತು ಶೇರ್‌ಕ್ರಾಪರ್ ಅಥವಾ ಟೆನೆಂಟ್ ಆದರೆ ಅನ್ವಯವಾಗುವ ಕಾಂಟ್ರ್ಯಾಕ್ಟ್/ಒಪ್ಪಂದವನ್ನು ಪರಿಶೀಲಿಸಬೇಕು.** ಮಧ್ಯವರ್ತಿಗಳು ಆವಶ್ಯಕ ಪ್ರೀಮಿಯಂನ್ನು ಸಂಗ್ರಹಿಸಬೇಕು ಮತ್ತು ರವಾನಿಸಬೇಕು ಮತ್ತು ವೈಯಕ್ತಿಕ ಪ್ರಸ್ತಾವ ಫಾರ್ಮ್‌ಗಳು ಮತ್ತು ಘೋಷಣೆಗಳು/ಲಿಸ್ಟಿಂಗ್ ಹಾಳೆಯಲ್ಲಿ (ಎಮ್‌ಐಎಸ್) ಸಾರಾಂಶದ ವಿವರಗಳೊಂದಿಗೆ ಕಳುಹಿಸಿಕೊಡಬೇಕು, ಐಎಗೆ ಸಾಫ್ಟ್ ಪ್ರತಿಯನ್ನು ಮತ್ತು ವಿಮೆ ಮಾಡಿಸಿಕೊಂಡ ಪ್ರತಿಯೊಬ್ಬ ಕೃಷಿಕನ ವಿವರಗಳನ್ನು ಒದಗಿಸಬೇಕು ಮತ್ತು ಡೇಟಾವನ್ನು ನೇರವಾಗಿ ಬೆಳೆ ವಿಮಾ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ಬಿ.ಐಚ್ಛಿಕ ಘಟಕದಡಿಯಲ್ಲಿ ಸಾಲ ಪಡೆಯದಿರುವ ಕೃಷಿಕರು-ವಿಮಾ ಕಂಪೆನಿಗಳಿಗೆ ನೇರವಾಗಿ

ವಿಮೆಯಲ್ಲಿ ಆಸಕ್ತರಾಗಿರುವ ಸಾಲ ಪಡೆಯದ ಕೃಷಿಕರು ಪ್ರಸ್ತಾವ ಫಾರ್ಮ್‌ನ್ನು ಅಂಚೆ ಅಥವಾ ಬೆಳೆ ವಿಮಾ ಪೋರ್ಟಲ್‌ನ ಮೂಲಕ ಆವಶ್ಯಕ ಪ್ರೀಮಿಯಂ ಮತ್ತು ಸಂಬಂಧಿತ ದಸ್ತಾವೇಜಿನೊಂದಿಗೆ, ಅಂದರೆ ಜಮೀನಿನ ದಾಖಲೆ ಅಥವಾ ಶೇರ್ ಕ್ರಾಪರ್ಸ್ ಅಥವಾ ಟೆನೆಂಟ್ಸ್ ಆದರೆ ಅನ್ವಯವಾಗುವ ಒಪ್ಪಂದ/

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617 UID-XXXX

ಕಾಂಟ್ರ್ಯಾಕ್ಟ್‌ನೊಂದಿಗೆ ವಿಮಾ ಕಂಪೆನಿಗೆ ಕಳುಹಿಸಿಕೊಡಬಹುದು.

ವಿಮಾ ಪ್ರಸ್ತಾವನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಮಾ ಕಂಪೆನಿಗಳು ಉಳಿಸಿಕೊಳ್ಳುತ್ತವೆ. ಯಾವುದೇ ಪ್ರಸ್ತಾವಗಳು ತಿರಸ್ಕರಿಸಲ್ಪಟ್ಟರೆ ಪ್ರೀಮಿಯಂನ್ನು ಪ್ರಸ್ತಾವವು ಸ್ವೀಕರಿಸಲ್ಪಟ್ಟ 1 ತಿಂಗಳೊಳಗೆ ವಿಮಾ ಕಂಪೆನಿಂದ ಮರು ಪಾವತಿಸ್ಪಡುತ್ತದೆ.

13. **ರಾಜ್ಯವು ಮತ್ತು ಅಧಿಸೂಚನೆಯು ಅನುಸರಿಸುವ ಪ್ರಕ್ರಿಯೆ ಯಾವುದು?** ಎಫ್‌ಡಬ್ಲ್ಯುಗಾಗಲೀ ಅಥವಾ ಯಾವುದೇ ರಾಜ್ಯ/ಕೇಂದ್ರಾಡಳಿತ ಸರಕಾರಕ್ಕಾಗಲೀ

ಎ. ಆರ್‌ಡಬ್ಲ್ಯುಬಿಸಿಐಎಸ್ ಯೋಜನೆಯ ಜಾರಿಗಾಗಿ ಭಾರತ ಸರಕಾರದಿಂದ ಆಡಳಿತಾತ್ಮಕ ನಿರ್ದೇಶನಗಳು ನೀಡಲಾದ ನಂತರ, ಎಸ್‌ಎಲ್‌ಸಿಸಿಐ ಬಿಡ್ ಸೂಚನೆ ನೀಡಿಕೆಯೊಂದಿಗೆ ನಿರ್ದಿಷ್ಟಪಡಿಸಲಾದ ಬೆಳೆಗಳು, ನಿರ್ದಿಷ್ಟಪಡಿಸಲಾದ ಜಾಗ, ಫೈನಾನ್ಸ್‌ನ ಸ್ಕೇಲ್ ಇತ್ಯಾದಿಗಳ ಉತ್ಪನ್ನದ ನಿಬಂಧನೆಗಳನ್ನು ಅಂತಿಮಗೊಳಿಸಲು ಸಾಮಾನ್ಯವಾಗಿ ಸಭೆಯನ್ನು ನಡೆಸುತ್ತದೆ.

ಬಿ. **ಎಸ್‌ಎಲ್‌ಸಿಸಿಸಿಐ** ಸಾಮಾನ್ಯವಾಗಿ ತಮ್ಮ ಆಯಾ ರಾಜ್ಯಗಳ ಸಂಬಂಧಪಟ್ಟ ಎಲ್ಲಾ ಜಾರಿಗೊಳಿಸುವ ಏಜೆನ್ಸಿಗಳಿಗೆ ಬೆಳೆಯ ಋತುಗಳು ಆರಂಭವಾಗುವ ಕನಿಷ್ಠ ಒಂದು ತಿಂಗಳು ಮೊದಲು ಅಧಿಸೂಚನೆಯನ್ನು ಮತ್ತು ತನ್ನ ಸುತ್ತೋಲೆಯನ್ನು ನೀಡುತ್ತದೆ,ಅಂದರೆ ಖರೀಫ್‌ಗಾಗಿ ಮಾರ್ಚ್ ಮತ್ತು ರಾಬಿಗಾಗಿ ಸೆಪ್ಟೆಂಬರ್ ಆಗಿದೆ.

ಸಿ. ರಾಜ್ಯ ಸರಕಾರ ಮತ್ತು ಆಯ್ದ ಜಾರಿಗೊಳಿಸುವ ಏಜೆನ್ಸಿಯ ಜೊತೆಯಲ್ಲಿ ಅಧಿಸೂಚನೆಯ ಆವಶ್ಯಕವಾದ ಎಲ್ಲಾ ಮಾಹಿತಿಯನ್ನು ಬೆಳೆ ವಿಮಾ ಪೋರ್ಟಲ್‌ನಲ್ಲಿ (www.agri-insurance.gov.in) ಅಪ್‌ಲೋಡ್ ಮಾಡುವುದನ್ನು ಅಧಿಸೂಚನೆ ನೀಡಿದ ಒಂದು ವಾರದೊಳಗೆ ಉಪಲಬ್ಧಗೊಳಿಸಬೇಕು.

14. **ದಾಖಲಾತಿಗೆ ಯಾವುದೇ ಕಟ್ ಆಫ್ ತಾರೀಖುಗಳಿವೆಯೇ?**

ಎ. **ಬ್ಯಾಂಕರ್ ಕೃಷಿಕರಿಂದ ಪ್ರೀಮಿಯಂ ಸಂಗ್ರಹಿಸಬೇಕು** – ಸಾಲ ಪಡೆದುಕೊಂಡ ಮತ್ತು ಸಾಲ ಪಡೆಯದಿರುವ ಎರಡೂ ಪ್ರಕಾರದ ಕೃಷಿಕರ ಸಲುವಾಗಿ ಪ್ರಸ್ತಾವ ಫಾರ್ಮ್‌ನ ಸ್ವೀಕೃತಿ/ಕೃಷಿಕರ ಖಾತೆಯಿಂದ ಪ್ರೀಮಿಯಂ ಡೆಬಿಟ್ ಮಾಡಲು ಕಟ್-ಆಫ್ ತಾರೀಖುಗಳು ಖರೀಫ್‌ಗಾಗಿ – 31ನೇ ಜುಲೈ ಮತ್ತು ರಾಬಿಗಾಗಿ– 31ನೇ ಡಿಸೆಂಬರ್

ಬಿ. **ಬ್ಯಾಂಕರ್‌ರು ವಿಮಾ ಕಂಪೆನಿಗೆ ಸಲ್ಲಿಸಬೇಕು** – ನೋಡಲ್ ಬ್ಯಾಂಕ್ ಶಾಖೆಗಳಿಂದ ಒಟ್ಟುಗೂಡಿಸಲಾದ ಘೋಷಣೆ/ಪ್ರಸ್ತಾವ ಫಾರ್ಮ್‌ನ್ನು ಸ್ವೀಕರಿಸಲು ಕಟ್-ಆಫ್-ತಾರೀಖುಗಳು ಖರೀಫ್ ಮತ್ತು ರಬೀ ಋತುವಿಗಾಗಿ ಕೃಷಿಕರ ಖಾತೆಯಿಂದ ಪ್ರೀಮಿಯಂನ್ನು ಡೆಬಿಟ್‌ಕಟ್-ಆಫ್ ತಾರೀಖಿನಿಂದ ಸಾಲ ಪಡೆದ ಕೃಷಿಕರಿಗೆ ಕ್ರಮವಾಗಿ 15 ದಿನಗಳೊಳಗೆ ಮತ್ತು ಸಾಲ ಪಡೆಯದ ಕೃಷಿಕರಿಗೆ 7 ದಿನಗಳಾಗಿವೆ.

ಸಿ. **ವಿಮಾ ಮಧ್ಯವರ್ತಿಗಳು ವಿಮಾ ಕಂಪೆನಿಗೆಸಲ್ಲಿಸಬೇಕು** – ಗೊತ್ತುಮಾಡಲಾದ ವಿಮಾ ಏಜೆಂಟರಿಂದಪ್ರಸ್ತಾವಫಾರ್ಮ್‌ಗಳ ಸ್ವೀಕೃತಿಯ ಕಟ್-ಆಫ್ ತಾರೀಖುಗಳು ಕ್ರಮವಾಗಿ ಘೋಷಣೆ /ಪ್ರೀಮಿಯಂನ ಸ್ವೀಕೃತಿಯಿಂದ 7 ದಿನಗಳೊಳಗೆ ಆಗಿವೆ.

ಅದನ್ನು ಒಮ್ಮೆ ನಿಗದಿಗೊಳಿಸಿದ ಮತ್ತು ಸೂಚಿಸಿದ ನಂತರ ಡಿಎಸಿ ಮತ್ತು
ಯಾವುದೆ ಪರಿಸ್ಥಿತಿಯಲ್ಲಿ ಋತುಮಾನ ಕಟ್-ಆಫ್ ತಾರೀಖುಗಳನ್ನು ವಿಸ್ತರಿಸುವ ಅಧಿಕಾರವಿಲ್ಲ ಎಂಬುದನ್ನು ಗಮನಿಸಬಹುದು.

15. **ಪೋರ್ಟಲ್‌ನಲ್ಲಿ ಡೇಟಾ ನಮೂದು ಮಾಡಲು ಯಾವುದೇ ಕಟ್ ಆಫ್ ತಾರೀಖುಗಳಿವೆಯೇ?**

ಎ. **ಬ್ಯಾಂಕರ್ಸ್ ಮತ್ತು ಮಧ್ಯವರ್ತಿಗಳು–** ಯಾವುದೇ ಬ್ಯಾಂಕರ್ ಅಥವಾ ಮಧ್ಯವರ್ತಿಯ ಮೂಲಕ ಮಾಡಲಾದ ಎಲ್ಲಾ ದಾಖಲಾತಿಗಳಿಗೆ ಬೆಳೆ ವಿಮಾ ಪೋರ್ಟಲ್‌ನಲ್ಲಿ ವೈಯಕ್ತಿಕ ವಿಮೆ ಮಾಡಿಕೊಂಡವರ ಡೇಟಾದ ಸಾಫ್ಟ್ ಪ್ರತಿಯನ್ನು ಅಪ್‌ಲೋಡ್ ಮಾಡಲು ಕಟ್- ಆಫ್ ತಾರೀಖುಗಳು ಪ್ರೀಮಿಯಂನ ಸಂಗ್ರಹಣೆಯ ಕಟ್-ಆಫ್ ತಾರೀಖಿನ ನಂತರ 15 ದಿನಗಳೊಳಗೆ ಆಗಿದೆ.

16. **ಡೇಟಾವನ್ನು ಸ್ವೀಕರಿಸಿದ ನಂತರ ವಿಮಾ ಕಂಪೆನಿಯು ಯಾವಾಗ ಕ್ಲೈಮ್‌ಗಳನ್ನು ತೀರಿಸುತ್ತದೆ ?**

ವಿಮಾ ಕಂಪೆನಿಗಳು ಪಾಲಿಸಿ ಕೊನೆಗೊಂಡ ತಾರೀಖಿನಿಂದ ಮೂರು ವಾರಗಳೊಳಗೆ ಅಂತಿಮ ಕ್ಲೈಮ್‌ಗಳ ಪಾವತಿಯನ್ನು ಮಾಡತಕ್ಕದ್ದು.

17. **ಬೆಲೆ ಅಥವಾ ಪ್ರೀಮಿಯಂ ದರವನ್ನು ಪಡೆಯಲು ವಿಮಾದಾರರ ಮೂಲ ಆವಶ್ಯಕತೆಗಳಾವುವು?**

ಎ. ಯೋಜನೆಯು **ಇನ್‌ಶೂರೆನ್ಸ್ ಯೂನಿಟ್ (ಐಯು)** ಎಂಬ ಕರೆಯಲ್ಪಡುವ ಆಯ್ದ ವ್ಯಾಖ್ಯಾನಿತ ಏರಿಯಾ ಅಪ್ರೋಚ್‌ನ ಧೋರಣೆಯಂತೆ ಕೆಲಸ ಮಾಡುತ್ತದೆ. ಹವಾಮಾನ ಸ್ಟೇಶನ್‌ಗಳನ್ನು ಅಳವಡಿಸಲು ರಾಜ್ಯ ಸರಕಾರವು ವಿಮಾ ಯೂನಿಟ್‌ಗಳನ್ನು ಸ್ಪಷ್ಟಪಡಿಸಬೇಕು.

ಬಿ. ಸಾಲ ಪಡೆದಿರುವ ಮತ್ತು ಸಾಲ ಪಡೆಯದಿರುವ – ಇವೆರಡೂ ಕೃಷಿಕರಿಗಾಗಿ ಪ್ರತಿ ಎಕರೆಗೆ ಆಶ್ವಾಸಿತ ಮೊತ್ತವು ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯಿಂದ ನಿರ್ಧರಿಸಲಾದಂತೆ ಸ್ಕೇಲ್ ಆಫ್ ಫೈನಾನ್ಸ್‌ನಂತೆಯೇ ಇರುತ್ತದೆ ಮತ್ತು ಅದಕ್ಕೆ ಸಮನಾಗಿರುತ್ತದೆ ಮತ್ತು ಎಸ್‌ಎಲ್‌ಸಿಸಿಐ ಇದನ್ನು ಮೊದಲೇ ಘೋಷಿಸಬೇಕು ಮತ್ತು ವಿಮಾ ಕಂಪೆನಿಗಳಿಗೆ ತಿಳಿಸಬೇಕು.

HDFC ERGO General Insurance Company Limited. IRDAI Reg. No.146. CIN: U66030MH2007PLC177117. Registered & Corporate Office: 1st Floor, HDFC House, 165-166 Backbay Reclamation, H. T. Parekh Marg, Churchgate, Mumbai – 400 020. For more details on the risk factors, terms and conditions, please read the sales brochure/ prospectus before concluding the sale. Trade Logo displayed above belongs to HDFC Ltd and ERGO International AG and used by the Company under license. UIN: CSC - Pradhan Mantri Fasal Bima Yojana - HDE-AG-P18-25-V01-17-18, Pradhan Mantri Fasal Bima Yojana- IRDAN125P0003V01201617 UID-XXXX

18. **ಬ್ಯಾಂಕರರು ಮತ್ತು ಮಧ್ಯವರ್ತಿಗಳಿಗೆ ಪಾವತಿಸಬೇಕಾದ ಕಮಿಷನ್ ಮತ್ತು ಬ್ಯಾಂಕ್ ಶುಲ್ಕಗಳು ಏನಿದೆ?**

ಬ್ಯಾಂಕ್ ಮತ್ತು ಇತರ ಹಣಕಾಸಿನ ಸಂಸ್ಥೆಗಳು ಇತ್ಯಾದಿಗಳಿಗೆ ಕೃಷಿಕರಿಂದ ಸಂಗ್ರಹಿಸಲಾದ ಪ್ರೀಮಿಯಂನ 4% ರಂತೆ ಸೇವಾ ಶುಲ್ಕವನ್ನು ಪಾವತಿಸಲಾಗುತ್ತದೆ. ಕೃಷಿಕರಿಗೆ ವಿಮೆ ಸಂಬಂಧಿತ ಸೇವೆಗಳನ್ನು ಒದಗಿಸುವುದಲ್ಲಿ ತೊಡಗಿರುವ ಗ್ರಾಮೀಣ ಏಜೆಂಟರಿಗೆ, ಐಆರ್‌ಡಿಎ ನಿಂತ್ರಣಗಳಡಿಯಲ್ಲಿ ನಿರ್ದಿಷ್ಟಪಡಿಸಲಾದ ಮಿತಿಗೆ ಒಳಪಟ್ಟು ವಿಮಾ ಕಂಪೆನಿಯಿಂದ ನಿರ್ಧರಿಸಲಾದಂತೆ ಸೂಕ್ತ ಕಮಿಷನ್ ಪಾವತಿಸಬಹುದಾಗಿದೆ.

19. **ಈ ಯೋಜನೆಯಡಿಯಲ್ಲಿ ಸೇವಾ ಶುಲ್ಕ ಅನ್ವಯಿಸುತ್ತದೆಯೇ?**

ಆರ್‌ಡಬ್ಲ್ಯುಬಿಸಿಐಎಸ್ ಸೇವಾ ಶುಲ್ಕದಿಂದ ವಿನಾಯಿತಿ ಪಡೆದಿದೆ.